# ಗೋವರ್ಧನ ಗಿರಿಧಾರಿ

**ಸ್ವಾಮಿ ಸಂತ ಹರಿಹರಾನಂದ ಸರಸ್ವತಿ**

**ಆಗಸ್ಟ್ ೩೧ ಶ್ರೀಕೃಷ್ಣ ಜನ್ಮಾಷ್ಟಮಿ. ಅವನ ಪುಣ್ಯಜೀವನಕ್ಕೆ ಸಂಬಂಧಿಸಿದ ಈ ಸ್ವಾರಸ್ಯಕರ ಕಥೆಯನ್ನು ನಿರೂಪಿಸಿರುವ ಶ್ರೀ ಸ್ವಾಮಿ ಸಂತ ಹರಿಹರಾನಂದ ಸರಸ್ವತಿಯವರು ಶಿಕಾರಿಪುರದಲ್ಲಿರುವ ದತ್ತಪೀಠಾಧಿಪತಿಗಳಾಗಿರುವರು.**

ಶ್ರೀಕೃಷ್ಣನ ಲೀಲಾಕ್ಷೇತ್ರವಾದ ಗೋಕುಲವು ಅತ್ಯಂತ ಸಂಭ್ರಮದಿಂದ ತುಂಬಿತುಳುಕುತ್ತಿದೆ. ಗೋಕುಲದ ಎಲ್ಲ ಗೋಪ ಗೋಪಿಯರೂ ತುಂಬು ಉತ್ಸಾಹದ ಚಿಲುಮೆಯಾಗಿದ್ದಾರೆ. ಕಾರಣ, ಪ್ರತಿ ವರ್ಷದಂತೆ ಆ ವರ್ಷ ಕೂಡ ದೇವರಾಜನಾದ ಇಂದ್ರನನ್ನು ತೃಪ್ತಿಪಡಿಸುವ ನಿಮಿತ್ತದಿಂದ ನಡೆಸುವ "ವಾರ್ಷಿಕ ಇಂದ್ರಪೂಜಾ" ಸಮಾರಂಭದ ಸಿದ್ಧತೆಯ ಸಂದರ್ಭ ಅದು. ಪ್ರತಿ ಗೋಪಿಯರ ಮನೆಯ ಮುಂದಿನ ಅಂಗಳದಲ್ಲಿ ವಿವಿಧ ಬಗೆಯ ರಂಗುರಂಗಿನ ರಂಗವಲ್ಲಿ ನಗುತ್ತಿದೆ. ಮನೆ-ಮನೆಯೂ ತಳಿರು-ತೋರಣ ಚಪ್ಪರಗಳಿಂದ ಶೋಭಿಸುತ್ತಿದೆ. ಇಂದ್ರನ ಪೂಜೆಗಾಗಿ ಇಡಿಯ ಗೋಕುಲ ಶೃಂಗಾರಗೊಂಡು ಮುತ್ತೈದೆಯಂತೆ ಕಂಗೊಳಿಸುತ್ತಿದೆ. ಪ್ರತೀ ವರ್ಷವೂ ನಂದಗೋಪ ಯಶೋದೆಯರ ಮನೆಯಲ್ಲಿ ಇಂದ್ರ ಪೂಜೆಯು ನಡೆಯುತ್ತದೆ. ನಂದನ ಪತ್ನಿ ಯಶೋದೆಯು ಇಂದ್ರಪೂಜೆಗೆ ಲಗುಬಗೆಯಿಂದ ಮನೆಯಲ್ಲಿ ಸಕಲ ಸಿದ್ಧತೆಗಳನ್ನೂ ಮಾಡುತ್ತಿದ್ದಳು.

ಅದೇ ಸಂದರ್ಭದಲ್ಲಿ ಹೊರಗೆಲ್ಲಿಯೋ ಹೋಗಿದ್ದ ಬಲರಾಮ ಕೃಷ್ಣರು ಮನೆಗೆ ಮರಳಿದರು. ತಮ್ಮ ಮನೆಯ ಹಬ್ಬದ ವಾತಾವರಣವನ್ನು ಕಂಡು ಇಬ್ಬರಿಗೂ ಅಚ್ಚರಿ. ಶ್ರೀಕೃಷ್ಣನಿಗಂತೂ ಕುತೂಹಲ ತಡೆಯಲಾಗಲಿಲ್ಲ. ತನ್ನ ತಾಯಿ ಯಶೋದೆಯ ಬಳಿಗೆ ಬಂದು, "ಅಮ್ಮಾ, ಇದೇನು ಮಾಡುತ್ತಿರುವಿರಿ! ಯಾವ ಪೂಜೆಗಾಗಿ ಈ ಭರದ ಸಿದ್ಧತೆ ನಡೆಯುತ್ತಿದೆ? ಅಲ್ಲದೆ ಗೋಕುಲದ ಎಲ್ಲರೂ ಯಾವ ಸಂತಸಕ್ಕಾಗಿ ಸಂಭ್ರಮ ಪಡುತ್ತಿದ್ದಾರೆ?" ಎಂದು ಪ್ರಶ್ನಿಸಿದ. ತರುವಾಯ ತಾಯಿ ಯಶೋದೆಯು, "ಮಗು, ಕನ್ನಯ್ಯ, ಇದು ಸ್ವರ್ಗದ ಅಧಿಪತಿ, ದೇವರಾಜ ಇಂದ್ರನ ಪ್ರೀತಿಗಾಗಿ ಮಾಡುವ ಪೂಜೆಯ ಸಿದ್ಧತೆ" ಎಂದುತ್ತರಿಸಿದಳು. "ಏನು! ಇಂದ್ರನಿಗೆ ಪೂಜೆಯೇ? ಅವನಿಗೆ ಏಕೆ ಪೂಜೆ ಮಾಡಬೇಕು? ಅವನೇನು ಕೊಡುತ್ತಾನೆ ನಮಗೆ?" ಮತ್ತೆ ಪ್ರಶ್ನಿಸಿದ ಕೃಷ್ಣ. ಯಶೋದೆಯು ಶ್ರೀಕೃಷ್ಣನ ಗಲ್ಲ ಹಿಡಿದು ಮುದ್ದಿಸುತ್ತಾ—"ಕಂದಾ! ಇಂದ್ರನು ಸ್ವರ್ಗದ ಪ್ರಥಮ ಪ್ರಜೆ. ಅವನು ಇಹದ ಬದುಕಿನ ಎಲ್ಲ ಜೀವಿಗಳ ಯೋಗಕ್ಷೇಮವನ್ನು ನೋಡಿಕೊಳ್ಳುವನು. ಅವನನ್ನು ನಾವು ಶ್ರದ್ಧಾಭಕ್ತಿಯಿಂದ ಪೂಜೆ ಮಾಡಿದರೆ ಅವನು ಸಂತೃಪ್ತನಾಗಿ ನಮಗೆ, ಈ ನಾಡಿಗೆ, ಸಮೃದ್ಧಿಯಾಗಿ 'ವರ್ಷಧಾರೆ'ಯನ್ನು ಸುರಿಸಿ, ಬೆಳೆಯನ್ನು ನೀಡುತ್ತಾನೆ. ಈ ಇಂದ್ರಪೂಜೆಯು ನಮ್ಮಲ್ಲಿ ಗೋಕುಲದಲ್ಲಿ ನೂರಾರು ವರ್ಷಗಳಿಂದ ನಡೆದುಕೊಂಡು ಬಂದಿರುವ ಒಂದು ಸತ್ಸಂಪ್ರದಾಯ. ಪ್ರತಿವರ್ಷವೂ ನಾವು ಮಾಡುವ ಪೂಜೆಯಿಂದ ತೃಪ್ತನಾಗಿ ಆ ಕೃಪಾಸಾಗರನಾದ ಇಂದ್ರ ದೇವನು ನಮ್ಮ ಮೇಲೆ ಅಪಾರವಾಗಿ ಅನುಗ್ರಹ ಮಾಡುತ್ತಾ ಬಂದಿದ್ದಾನೆ. ಅದಕ್ಕಾಗಿ ಈ ವರ್ಷ ಇನ್ನೂ ಅದ್ದೂರಿಯ ಪೂಜೆ ನಡೆಸಲು ಸಿದ್ಧತೆ ಮಾಡುತ್ತಿದ್ದೇವೆ" ಎಂದಳು.

ತರುವಾಯ ಶ್ರೀಕೃಷ್ಣನು ಏನೂ ಅರಿಯದವನಂತೆ, ನಸುನಗುತ್ತಾ "ಅಮ್ಮಾ, ನನಗೂ, ಅಣ್ಣನಿಗೂ ತುಂಬಾ ಸಂತೋಷವಾಗುತ್ತಿದೆ. ನೀವು ಶ್ರದ್ಧೆಯಿಂದ ಮಾಡುವ ಈ ಪೂಜೆಯಲ್ಲಿ ನಾವೂ ನಿಮ್ಮೊಂದಿಗೆ ಭಾಗವಹಿಸುತ್ತೇವೆ. ಆದರೆ ಈ ವರ್ಷದ ಪೂಜೆಯಲ್ಲಿ ಒಂದು ಸಣ್ಣ ಬದಲಾವಣೆ ಮಾಡೋಣ ಎಂದು ಚಿಂತಿಸುತ್ತಿದ್ದೇನೆ. ನೀವು ಅದಕ್ಕೆ ಸರಿಯಾಗಿ ಸ್ಪಂದಿಸಿದರೆ ಸಾಕು. ಇದುವರೆಗೆ ನೀವು ಮಾಡಿರದ, ನೋಡಿರದ ಒಂದು 'ವಿನೂತನ'ಪೂಜೆ ಅದು. ನಿಮ್ಮ ಸಮ್ಮತಿ ಕೇಳುತ್ತಿದ್ದೇನೆ" ಎಂದ. ನಂತರ ಯಶೋದೆಯು ಕುತೂಹಲಗೊಂಡು "ಕನ್ನಯ್ಯ, ಏನು ಬದಲಾವಣೆ ಅದು? ನಾವು ಏನೇ ಬದಲಾವಣೆ ಮಾಡಿದರೂ ಇಂದ್ರ ತೃಪ್ತಿ ಪಡುತ್ತಾನೆಯೇ?" "ಅಮ್ಮಾ, ಇಂದ್ರನ ಮಾತು ಹಾಗಿರಲಿ, ಈಗ ನನ್ನ ಮಾತುಗಳನ್ನು ಸಾವಧಾನದಿಂದ ಕೇಳು. ಪ್ರಕೃತ ಇದೇ ಸಂಭಾರಗಳಿಂದ ನಾವು ನಮ್ಮ 'ಗೋವರ್ಧನಗಿರಿಗೆ'—ಗೋಕುಲದ ಹೊರಗಿರುವ ಆ ಪರಮ ಪಾವನ ಗಿರಿಗೆ—ಪೂಜೆ ಸಲ್ಲಿಸಿದರೆ ನಮ್ಮ ಸೇವೆಯ ಫಲವು ಪ್ರತಿವರ್ಷಕ್ಕಿಂತ ಅಧಿಕಾಧಿಕವಾಗಿ ಬರುತ್ತದೆ. ನಮ್ಮ ಗೋಕುಲದ ಸಂಪತ್ತಾದ ಗೋವುಗಳನ್ನೆಲ್ಲ ಶೃಂಗರಿಸಿ, ನೀರೆಯರಾದ ಗೋಪಿಯರ-ಗೋಪಬಾಲಕ ಸಮೂಹದೊಂದಿಗೆ ಕಲಶ-ಕನ್ನಡಿ ವಾದ್ಯ ಸಹಿತ ಹೊರಟು ಗೋವರ್ಧನಗಿರಿಗೆ ಶ್ರದ್ಧಾಸಕ್ತಿಭಕ್ತಿಗಳಿಂದ ಪೂಜೆ ಸಲ್ಲಿಸೋಣ. ಏಳಿ, ಗೋಪ-ಗೋಪಿಯರಿಗೆಲ್ಲ ತಿಳಿಸಿ, ಉತ್ಸಾಹದಿಂದ ನಾಳೆಯ ಪ್ರಾತಃಕಾಲ ಗೋವರ್ಧನಗಿರಿಗೆ ತೆರಳೋಣ" ಎಂದ.

ಅದೇ ಸಮಯಕ್ಕೆ ನಂದನೂ ಮನೆಗೆ ಬಂದ. ವಿಷಯ ತಿಳಿದು ಅವನೂ ಕೂಡ ಯಶೋದೆಯೊಂದಿಗೆ "ಕೃಷ್ಣಾ, ಇದು ಆರೋಗ್ಯಕರವಾದ ಸಲಹೆಯಲ್ಲ. ಇದರಿಂದ ಮುಂದೆ ಅನಾಹುತವೇ ಹೊರತು ಆನಂದ ದೊರೆಯುವುದಿಲ್ಲ. ವರ್ಷಂಪ್ರತಿ ನಡೆದು ಬಂದಿರುವ ಇಂದ್ರಪೂಜೆಯನ್ನು ಬಿಟ್ಟು ಆ ಬೆಟ್ಟಕ್ಕೆ ಪೂಜೆ ಮಾಡುವುದೇ? ಹಾಗೇನಾದರೂ ಮಾಡಿದಲ್ಲಿ, ಆ ದೇವರಾಜನ ಆಗ್ರಹಕ್ಕೆ ಪಾತ್ರರಾಗಬೇಕಾಗುತ್ತದೆ. ಕನ್ನಯ್ಯಾ, ಬೇಡಪ್ಪ, ಇಂದ್ರಪೂಜೆಯನ್ನು ನಿಲ್ಲಿಸುವುದು ಬೇಡ. ಅವನಿಗೆ ಪೂಜೆ ಸಲ್ಲದಂತೆ ಮಾಡುವುದು ಅಪರಾಧವಾಗುತ್ತದೆ. ನಡೆಯಿರಿ ನಮ್ಮ ಕರ್ತವ್ಯವನ್ನು ನಿರ್ವಹಿಸೋಣ" ಎಂದ. ತರುವಾಯ ಶ್ರೀಕೃಷ್ಣನು ಮಾತನಾಡುತ್ತ,

"ಇಂದ್ರಪೂಜೆಯನ್ನು ತಪ್ಪಿಸುವುದರಿಂದ ಯಾವ ಅನಾಹುತವೂ ಅಪಾಯವೂ ಆಗುವುದಿಲ್ಲ. ಆ ವಿಷಯದಲ್ಲಿ ನಾನು ಖಾತ್ರಿ ಕೊಡುತ್ತೇನೆ" ಎಂದು ಎಲ್ಲರನ್ನೂ ಒಪ್ಪಿಸಿ ಎಲ್ಲರ ಸಮ್ಮತಿಯನ್ನು ಪಡೆದು ಎಲ್ಲರನ್ನೂ ಕರೆದುಕೊಂಡು ತಾನು ಪರಿವಾರದ ಮುಂಚೂಣಿಯಲ್ಲಿದ್ದು ಪಾವನ ಗೋವರ್ಧನಗಿರಿಯತ್ತ ಪ್ರಯಾಣ ಬೆಳೆಸಿದ. ಶ್ರೀಕೃಷ್ಣನ ಮಾತಿನಂತೆ ಎಲ್ಲ ಗೋವುಗಳನ್ನೂ ಸುಂದರವಾಗಿ ಶೃಂಗರಿಸಲಾಗಿತ್ತು. ಸುಮಂಗಲಿಯರು ಕಲಶ-ಕನ್ನಡಿ ಹಿಡಿದಿದ್ದರು. ವಾದ್ಯಘೋಷ ಮೊಳಗುತ್ತಿತ್ತು. ನಂದಯಶೋದೆಯರು ಮುಂದಿದ್ದರು. ಗೋವರ್ಧನ ಗಿರಿ ಬಂದೇ ಬಿಟ್ಟಿತು. ಎಲ್ಲರೂ ಗಿರಿಯ ತಟಕ್ಕೆ ಬಂದು ನಿಂತರು.

ಶ್ರೀಕೃಷ್ಣನ ದಿವ್ಯ ಮಾರ್ಗದರ್ಶನದಲ್ಲಿ ಸಕಲ ಮಂಗಳ ದ್ರವ್ಯಗಳಿಂದ ಗಿರಿಯ ಪೂಜೆಯು ವಿಧಿಯುಕ್ತವಾಗಿ ಆರಂಭವಾಯಿತು. ಎಲ್ಲ ಗೋಪಗೋಪಿಯರಿಗೆ ಒಂದು ಬಗೆಯ ವಿನೂತನವಾದ ಹೊಸ ಅನುಭವವಾಗುತ್ತಿದೆ.

ಇಂದ್ರಪೂಜೆಗಿಂತ ಗಿರಿಯ ಪೂಜೆಯು ಭಿನ್ನವಾಗಿದೆ. ಗಿರಿಗೆ ಶೋಡಷೋಪಚಾರ ಪೂಜೆಯು ನಡೆದು ಗಿರಿಯ ಸುತ್ತಲೂ ಗೋಪಿಯರು ಹಾಡುತ್ತಾ ಕುಣಿಯುತ್ತಾ, ಭಜನೆ ಮಾಡುತ್ತಾ ಗೋವಿಂದಾ, ಗೋವಿಂದಾ ಎಂದು ಗಟ್ಟಿಯಾಗಿ ಕೂಗುತ್ತಾ ಮೈಮರೆತಿದ್ದಾರೆ. ಶ್ರೀಕೃಷ್ಣನೂ ನಂದಯಶೋದೆಯರೊಡನೆ ಬಲರಾಮ ಸಹಿತನಾಗಿ-ಗೋಪಗೋಪಿಯರೊಡಗೂಡಿ, ಗಿರಿಯನ್ನು ಪ್ರದಕ್ಷಿಣೆ ಹಾಕುತ್ತಿದ್ದಾನೆ. ಒಂದು ವಿಸ್ಮಯವೆಂದರೆ, ಶ್ರೀಕೃಷ್ಣನು ಗೋಪಿಯರೊಡಗೂಡಿ ಕೆಳಗೆ ಗಿರಿಯನ್ನು ಸುತ್ತುತ್ತಿದ್ದಾನೆ—ಗಿರಿಯ ಮೇಲೂ "ವೇಣುವಾದನ" ಮಾಡುತ್ತಾ ನಿಂತಿದ್ದಾನೆ. ನೆರೆದವರೆಲ್ಲರೂ ಅತ್ಯಂತ ಅಚ್ಚರಿಯಿಂದ ನೋಡುತ್ತಿದ್ದಾರೆ. ಎಲ್ಲರೂ ಇದು ಶ್ರೀಕೃಷ್ಣನ ಲೀಲೆ ಎಂದುಕೊಳ್ಳುತ್ತಿರುವಾಗ, ಇದ್ದಕ್ಕಿದ್ದಂತೆ ಹಾಡುಹಗಲೇ ನೀಲಾಗಸದಲ್ಲಿ ಕಪ್ಪುಮೋಡ ಕವಿಯಿತು. ಮಿಂಚಿನ ಸಂಚು ಎಲ್ಲರನ್ನೂ ಆತಂಕಗೊಳಿಸಿದೆ. ಗುಡುಗು-ಸಿಡಿಲಿನ ಆರ್ಭಟದೊಂದಿಗೆ "ಧೋ-ಧೋ"ಎಂದು ಮಳೆ ಸುರಿಯಲಾರಂಭಿಸಿತು. ಸಂತಸ-ಸಂಭ್ರಮ ತುಂಬಿದ್ದ ಆ ವೇಳೆ ಒಂದು ಕ್ಷಣದಲ್ಲಿ ಎಲ್ಲರಲ್ಲಿಯೂ ಭೀತಿಯ ಛಾಯೆ ಅಂಕುರಿಸಿತು. ಕೃಷ್ಣಾ, ಕೃಷ್ಣಾ ಎಂದು ಎಲ್ಲರೂ ಕೂಗತೊಡಗಿದರು.

ಗೋಪಿಯರೆಲ್ಲ ಗಾಬರಿಯಿಂದ ತತ್ತರಿಸಿ, ಎಂತಹ ಅಪಾಯಕ್ಕೆ ನಾವು ಸಿಕ್ಕಿದ್ದೇವೆ, ಈಗ ನಾವು ಗೋಕುಲವನ್ನು ಸೇರುವುದು ಹೇಗೆ ಎಂದು ಚಡಪಡಿಸುತ್ತಿರುವಾಗ, ನಂದ-ಯಶೋದೆಯರು ತಮ್ಮ ಸನಿಹದಲ್ಲಿ ಇದ್ದ ಕೃಷ್ಣನನ್ನು ಕುರಿತು, "ಕೃಷ್ಣಾ, ನಾವು ಈ ಮೊದಲೇ ನಿನಗೆ ಮುಂದಾಗುವ ಅಪಾಯದ ಕುರಿತು ಹೇಳಿದ್ದೆವು. ನಮ್ಮ ಮಾತನ್ನು ನೀನು ಕೇಳಲಿಲ್ಲ. ಹಠಮಾಡಿ ಇಂದ್ರಪೂಜೆಯನ್ನು ತಪ್ಪಿಸಿ ಈ ಗಿರಿಪೂಜೆಯನ್ನು ಮಾಡಿಸಿದೆ. ಪರಿಣಾಮ: ನಮ್ಮ ವ್ರತವೆಲ್ಲ ಕೆಟ್ಟು ನಾವು ಪರಿತಾಪ ಪಡುವಂತಾಯಿತು. ಆ ದೇವರಾಜ ಇಂದ್ರನು ನಮ್ಮ ವಿಷಯದಲ್ಲಿ ಆಗ್ರಹಗೊಂಡಿರುವುದರಲ್ಲಿ ಸಂಶಯವಿಲ್ಲ. ಕನ್ನಯ್ಯಾ, ಇದು ಅವನ ಕ್ರೋಧದ ಪರಿಣಾಮ. ಈಗ ಮಾಡುವುದೇನು? ನಮ್ಮ ತಪ್ಪನ್ನು ಮನ್ನಿಸು ಎಂದು ಅವನಿಗೆ ಶರಣಾಗಿ ಪ್ರಾರ್ಥಿಸುವುದೊಂದೇ ನಮಗುಳಿದಿರುವ ದಾರಿ" ಎಂದರು. ಒಂದೇ ಒಂದು ಕ್ಷಣ ಶ್ರೀಕೃಷ್ಣನು ಗಂಭೀರನಾಗಿದ್ದು, "ಇದು ದೇವೇಂದ್ರನ ಕುತಂತ್ರ"ವೇ ಎಂದು ಅರಿತು ಮುಂದೇನು ಮಾಡಬೇಕೆಂಬುದನ್ನು ಚಿಂತಿಸುತ್ತಿದ್ದ.


ಅಹುದು. ಇದು ಇಂದ್ರನ ಕೃತ್ಯವೇ. ಸಂದೇಹವೇ ಇಲ್ಲ. ವಾಸ್ತವವಾಗಿಯೂ ಇಂದ್ರನಿಗೆ ಕೋಪ ಬಂದಿದೆ. ಒಂದು ಶ್ರೀಕೃಷ್ಣನ ಮೇಲೆ. ತನಗೆ ಸಲ್ಲಬೇಕಾದ ಪೂಜೆಯನ್ನು ಅವನು ತಪ್ಪಿಸಿದನಲ್ಲ ಎಂದು. ಎರಡನೆಯದು ಗೋಪ-ಗೋಪಿಯರ ಮೇಲೆ, ಕೃಷ್ಣನ ಮಾತು ಕೇಳಿ, ನನಗೆ ಸಲ್ಲಿಸಬೇಕಾದ ಪೂಜೆಯನ್ನು ಆ ಗಿರಿಗೆ ಸಲ್ಲಿಸಿ ನನಗೆ ಅವಮಾನ ಮಾಡಿದರು ಎಂದು. ಅದಕ್ಕೆ ಕ್ರುದ್ಧನಾದ ಇಂದ್ರನು ಕೃಷ್ಣನ ಸಹಿತ ಎಲ್ಲರಿಗೂ ಬುದ್ಧಿ ಕಲಿಸಬೇಕೆಂದು ಅವನ ಅಲ್ಪಬುದ್ಧಿಯಿಂದ ಹೀಗೆ ಮಾಡಿದ್ದಾನೆ.

ಪುಷ್ಕಲ-ಆವರ್ತರೆಂಬ ಮೋಡದ ಅಭಿಮಾನೀ ದೇವತೆಗಳನ್ನು ಕರೆಸಿ—"ನೀವು ಮೋಡಗಳಲ್ಲಿ ಸೇರಿ, ಇಡೀ ಗೋಕುಲವೇ ಕೊಚ್ಚಿ ಹೋಗುವಂತೆ-ಭೀಕರ ಮಳೆ ಸುರಿಸಿ ನನ್ನ ಇಚ್ಛೆಯನ್ನು ಪೂರೈಸಿ" ಎಂದು ಆದೇಶ ಕೊಟ್ಟಿದ್ದ. ಇಂದ್ರನ ಆಣತಿಯಂತೆ ಪುಷ್ಕಲ-ಆವರ್ತರು ತಮ್ಮ ಕಾರ್ಯವನ್ನು ವೈಭವೀಕರಿಸಿ "ಮುಸಲಧಾರೆ"ಯಂತೆ ಮಳೆ ಸುರಿಸಿ ತಮ್ಮ ಕೈಂಕರ್ಯವನ್ನು ಸಲ್ಲಿಸಿದ್ದರು. ಇದನ್ನರಿತ ಆಶ್ರಿತವತ್ಸಲನಾದ ಶ್ರೀಕೃಷ್ಣನು—ಇಂದ್ರನಿಗೆ ತಕ್ಕ ಉತ್ತರ ಕೊಟ್ಟು—ಒಂದು ಪಾಠ ಕಲಿಸಬೇಕೆಂದು ಸಂಕಲ್ಪಿಸಿದ.

ತನ್ನಲ್ಲಿ ಅಪಾರ ನಂಬುಗೆ ಇಟ್ಟಿರುವ, ಗೋಕುಲದ ಸಮಸ್ತ ಸತ್ಪ್ರಜೆಗಳನ್ನು ಆಪತ್ತಿನಿಂದ ಪಾರುಮಾಡಲು ನಿರ್ಧರಿಸಿ, ತನ್ನವರನ್ನೆಲ್ಲ ಕುರಿತು, ಯಾರೂ ವಿಚಲಿತರಾಗಬೇಕಿಲ್ಲ, ಭಯಪಡಬೇಕಿಲ್ಲ ಎಂದು ಅಭಯ ನೀಡಿ, ಮರುಕ್ಷಣದಲ್ಲಿ ಇಡಿಯ ಗೋವರ್ಧನಗಿರಿಯನ್ನೇ ತನ್ನ ಕೈಯ ಕಿರುಬೆರಳಿನಿಂದ ಎತ್ತಿ ಹಿಡಿದು—"ಎಲ್ಲರೂ ಬನ್ನಿ ಗಿರಿಯ ಕೆಳಗೆ ಬಂದು ನಿಂತುಕೊಳ್ಳಿರಿ" ಎಂದು ಕೂಗಿ ಹೇಳಿದ.

ನಂದ-ಯಶೋದೆಯರು ಮೊದಲ್ಗೊಂಡು ನೆರೆದ ಎಲ್ಲ ಗೋಪ-ಗೋಪಿಯರೂ ಶ್ರೀಕೃಷ್ಣನ ಈ ಚಮತ್ಕಾರದಿಂದ ಚಕಿತರಾಗಿ ಸರಸರನೆ ಬಂದು ಗಿರಿಯ ಕೆಳಗೆ ನಿಂತು ಶ್ರೀಕೃಷ್ಣಸ್ತುತಿ ಮಾಡುತ್ತಿದ್ದಾರೆ. ಗೋವುಗಳೂ ಸಹ ಗಿರಿಯ ಕೆಳಗೆ ಬಂದು ರಕ್ಷಣೆ ಪಡೆಯುತ್ತಿವೆ. ಎಲ್ಲರ ಅಂತರಂಗದಲ್ಲಿದ್ದ ಆತಂಕ ಶ್ರೀಕೃಷ್ಣನ ಕೃಪೆಯಿಂದ ದೂರವಾಗಿದೆ.

ಎಲ್ಲರೂ ಗಟ್ಟಿಯಾಗಿ ಮುಗಿಲು ಮುಟ್ಟುವಂತೆ ಕಡು ಕರುಣಾಳುವಾದ ವಾಸುದೇವ ಶ್ರೀಕೃಷ್ಣನನ್ನು ಸ್ತುತಿಸುತ್ತಿದ್ದಾರೆ. ಆ ಗೋಪಿಯರ ಸುಮಧುರ ಸಮೂಹಗಾನವು ಇಂದ್ರಲೋಕವನ್ನು ಮುಟ್ಟಿದೆ. ಶ್ರೀಕೃಷ್ಣಸ್ತುತಿಯ ಆ ಸಮೂಹ ಗಾನಲಹರಿಯನ್ನು



ಕೇಳಿದ ಇಂದ್ರನು, ಇದು ಶ್ರೀಕೃಷ್ಣನು ಮಾಡಿರುವ ಮೋಡಿ ಎಂದು ತಿಳಿದು, ಇನ್ನು ತಾನು ತಡಮಾಡುವುದು ಸಲ್ಲದೆಂದು ಕೂಡಲೇ ಶ್ರೀಕೃಷ್ಣಸಂದರ್ಶನ ಮಾಡುವ ಸಂಕಲ್ಪದಿಂದ, ಸ್ವರ್ಗದಿಂದ ಗೋಕುಲದ ಗೋವರ್ಧನ ಪರ್ವತಕ್ಕೆ ಹೊರಟ.

ತನ್ನ ಪರಿವಾರದೊಡನೆ ಪ್ರತ್ಯಕ್ಷನಾದ ದೇವೇಂದ್ರ ಶ್ರೀಕೃಷ್ಣನ ದರ್ಶನ ಮಾಡಿ, "ಸಕಲ ಲೋಕವನ್ನೂ ಪರಿಪಾಲಿಸುವ ಬಗೆ ಯನ್ನರಿತ ನಿನ್ನ ಮುಂದೆ ನಮ್ಮ ಆಟ ಏನು ನಡೆಯುತ್ತದೆ? ವಾಸುದೇವ, ದಯಮಾಡಿ ನನ್ನನ್ನು ಕ್ಷಮಿಸು. ನನಗೆ ನನ್ನ ತಪ್ಪಿನ ಅರಿವಾಗಿದೆ. 'ನಾನೇ ದೊಡ್ಡವನು, ಎಲ್ಲರೂ ನನ್ನನ್ನು ಗೌರವಿಸ ಬೇಕು. ಎಲ್ಲ ಪೂಜೆ-ಪುರಸ್ಕಾರಗಳೂ ನನಗೇ ಸಲ್ಲಬೇಕು' ಎಂಬ ಅಹಂಕಾರ ಮಮಕಾರದಲ್ಲಿ ಮೆರೆಯುತ್ತಿದ್ದೆ. ನಿನ್ನಿಂದ ನಾನು ಒಂದು ಪಾಠ ಕಲಿತಂತಾಯಿತು. ನೀನು ಗೋವಿಂದನಲ್ಲವೇ? ನಿನ್ನಲ್ಲಿ ಮೊರೆ ಇಟ್ಟವರನ್ನು ನೀನು ಅದೆಷ್ಟೇ ಅಡೆ-ತಡೆಗಳು ಬಂದರೂ, ಅದನ್ನೆಲ್ಲ ಮೆಟ್ಟಿ ಪ್ರೀತಿ-ಕರುಣೆಗಳಿಂದ ರಕ್ಷಿಸುವ ದೈವ. ಭೂಮಿ, ಗೋವು, ಐಶ್ವರ್ಯ, ಪ್ರಪಂಚ—ಎಲ್ಲವನ್ನೂ ರಕ್ಷಿಸುವ ಕಲೆ ನಿನ್ನನ್ನು ಬಿಟ್ಟರೆ ಬೇರೆ ಯಾರಿಗಿದೆ? ಅದಕ್ಕೇ ಯೋಗಿಗಳು ನಿನ್ನನ್ನು ಗೋವಿಂದ ಎಂದು ಕರೆದುದು. 'ಗೋ' ಶಬ್ದಕ್ಕೆ, ಈ ನಾಲ್ಕೂ ಅರ್ಥಗಳಿವೆ. ಇಡೀ ಬ್ರಹ್ಮಾಂಡವೇ ನಿನ್ನದು. ನಿನ್ನ ಸೃಷ್ಟಿಯ ಜೀವರಾಶಿಗಳ ಮೇಲೆ ನಿನಗೆ ಎಷ್ಟು ಪ್ರೀತಿ ಅನುಕಂಪ ಇದೆ ಎಂಬುದು ನನಗೆ ಈಗ ಅರಿವಾಯಿತು. ಅದರಲ್ಲಿಯೂ ವಿಶೇಷವಾಗಿ ನಿನ್ನ ಮತ್ತು ಗೋಕುಲದ ಗೋಪಿಯರ ಸಂಬಂಧವು ಅವಿನಾಭಾವವಾದುದು ಎಂಬುದೂ ಇದರಿಂದ ತಿಳಿಯುತ್ತದೆ."

ಅಹುದು, ಇಂದ್ರ ಹೇಳುವುದು ನಿಜ. ಗೋಪಿಯರು ಶ್ರೀಕೃಷ್ಣನಲ್ಲಿ ಅಪಾರ ಪ್ರೀತಿಯುಳ್ಳವರು. ಅವರದು ಪವಿತ್ರಪ್ರೇಮ. ಜಾರಿಣಿಯ ಪ್ರೇಮವಲ್ಲ. ಅವರು ಶ್ರೀಕೃಷ್ಣ ನೊಂದಿಗೆ ಎಂದೂ ದೇಹಸಂಬಂಧವನ್ನು ಬಯಸಿದವ ರಲ್ಲ. ಅವರದು ನಿಷ್ಕಲ್ಮಶವಾದ, ನಿಷ್ಕಾಮವಾದ ಅವ್ಯಾಜ ಪ್ರೇಮ. ಶ್ರೀಕೃಷ್ಣನೇ ಅವರಿಗೆ ಉಸಿರು. ಅವನಿಲ್ಲದೆ ಅವರಿಗೆ ಬದುಕೇ ಇಲ್ಲ. ಅವನು ಯಾರೆಂದು ಅವರಿಗೆ ಚೆನ್ನಾಗಿ ತಿಳಿದಿದೆ. ಒಮ್ಮೆ ಉದ್ಧವನು ಗೋಕುಲದಲ್ಲಿ ಅವರನ್ನು ಭೇಟಿಯಾದ ಸಂದರ್ಭ. ಶ್ರೀಕೃಷ್ಣನ ಮೇಲಿನ ಕಾಳಜಿಯನ್ನೂ ಅವರು ಅವನಿಗಾಗಿ ಚಡಪಡಿಸುವುದನ್ನೂ ಕಂಡು ಅತ್ಯಂತ ಕುತೂಹಲದಿಂದ ಗೋಪಿಯರನ್ನು ಕುರಿತು, "ನೀವು ಶ್ರೀಕೃಷ್ಣನಿಗಾಗಿ ಇಷ್ಟೊಂದು ಹಂಬಲಿಸುತ್ತಿರುವಿರಲ್ಲ, ಅವನನ್ನು ಯಾರೆಂದು ತಿಳಿದುಕೊಂಡಿರುವಿರಿ?" ಎಂದು ಪ್ರಶ್ನಿಸುತ್ತಾನೆ. ಗೋಪಿಯರು ಕೃಷ್ಣನನ್ನು ಸಾಮಾನ್ಯ ಮಾನವನೆಂದು ಭಾವಿಸಿರಬಹುದೇ? ಎಂದು ಉದ್ಧವನ ಭಾವನೆ. ಅದಕ್ಕಾಗಿ ಈ ಪ್ರಶ್ನೆ. ಅವನ ಪ್ರಶ್ನೆಗೆ ಗೋಪಿ ಯರು, "ಉದ್ಧವಾ! ನಾವು ಶ್ರೀಕೃಷ್ಣನನ್ನು ಸರಿ ಯಾಗಿಯೇ, ನಮ್ಮ ಬುದ್ಧಿಗೆ ನಿಲುಕುವಷ್ಟರ ಮಟ್ಟಿಗೆ ಅರ್ಥ ಮಾಡಿ ಕೊಂಡಿದ್ದೇವೆ. ಶ್ರೀಕೃಷ್ಣನು ಕೇವಲ ಯಾದವಕುಲವನ್ನು ಉದ್ಧರಿಸು ವುದಕ್ಕಾಗಿ ಬಂದಿರುವ ಮಾನವಮಾತ್ರನಲ್ಲ. ಅವನು ಮಾನವ ಕುಲವನ್ನು ಉದ್ಧರಿಸುವುದಕ್ಕಾಗಿ ಬಂದಿರುವ ಮಾಧವ. ಇದುವರೆಗೆ ಅಂತಹ ಶ್ರೀಕೃಷ್ಣನಿಗಿಂತಲೂ ಬೇರೆ ಪರತತ್ತ್ವವನ್ನು ನಾವು ಕಂಡಿಲ್ಲ. ಅವನೇ ನಮ್ಮ ಸರ್ವಸ್ವ" ಎಂದುತ್ತರಿಸಿದರು. ಉದ್ಧವನು ಅವರ ದಾರ್ಶನಿಕ ಬುದ್ಧಿಗೆ ಮೆಚ್ಚಿ, ಅವರನ್ನು ತುಂಬು ಹೃದಯದಿಂದ ಅಭಿನಂದಿಸಿ ದ್ವಾರಕೆಗೆ ಹೊರಟ. ಗೋಪಿಯರು ಜಗನ್ಮೋಹಕ ಮೂರ್ತಿಯಾದ ಶ್ರೀಕೃಷ್ಣನ ಮೂರ್ತಿಯನ್ನು, ಉಪನಿಷತ್ಪ್ರತಿಪಾದ್ಯ ನಾದ ಗೋವಿಂದನನ್ನು ಪ್ರತಿ ಗೋವಿನಲ್ಲಿಯೂ ಕಂಡವರು. ಅವರು, ಸಾಕ್ಷಾತ್ ಋಷಿಚೇತನರೆಂದು ಸ್ವಯಂ ಶ್ರೀವೇದವ್ಯಾಸ ರಿಂದಲೇ ಪ್ರಶಂಸೆಗೆ ಪಾತ್ರರಾದವರು.

ಇಂತಹ ಗೋಪಿಯರ ಮತ್ತು ಶ್ರೀಗೋವಿಂದನ ಪವಿತ್ರ ಪ್ರೇಮವನ್ನು, ಸಂಬಂಧವನ್ನು ಇಂದ್ರನು ಪರೀಕ್ಷಿಸಿ ತಾನೇ ಸೋಲನ್ನು ಅನುಭವಿಸಿದ್ದ. ಸ್ವಯಂ ಇಂದ್ರನೇ ಶ್ರೀಕೃಷ್ಣನಲ್ಲಿ ಕ್ಷಮೆ ಬೇಡುತ್ತಾ, "ಹೇ, ಭಗವನ್ ವಾಸುದೇವ, ನನ್ನನ್ನು ಕ್ಷಮಿಸು. ನಿನ್ನ ಮತ್ತು ಗೋಕುಲದ ಸಂಬಂಧವನ್ನು ಪರೀಕ್ಷಿಸಲು ನಾನು ಹೀಗೆ ಮಾಡಿದೆ. ಇದರಲ್ಲಿ ನೀನು ಗೆದ್ದೆ. ನಾನು ಸೋತೆ" ಎಂದು ಹೇಳಿ, ಶ್ರೀಕೃಷ್ಣನಿಗೆ ಗೋವಿಂದರಾಜ ಪಟ್ಟಾಭಿಷೇಕವನ್ನು ಅದ್ದೂರಿಯಿಂದ ಮಾಡಿ ಅವನ ಅನುಮತಿ ಪಡೆದು ನಿರ್ಗಮಿಸಿದ. ✱